MOTION TO EXTEND TIME FOR PRESENTATION OF THE REPORTS OF JOINT SELECT COMMITTEES ON :—

(i) *Mysore Religious and Charitable Institutions and Trusts Bill*, 1962.

(ii) *Mysore Prevention of Fragmentation and Consolidation of Holdings Bill*, 1964.

SRI RAMAKRISHNA HEGDE (Minister for Finance).—Sir, on behalf of the Minister for Revenue, I move :—

(*a*) " under the second proviso to sub-rule (1) of rule 238 read with rule 247 of the Rules of Procedure and Conduct of Business in the Mysore Legislative Assembly that the time limit for the presentation of the Report of the Joint Select Committee on the Mysore Religious and Charitable Institutions and Trusts Bill, 1962 be extended till the end of October 1966."

(*b*) " under the second proviso to sub-rule (1) of rule 238 read with rule 247 of the Rules of Procedure and Conduct of Business in the Mysore Legislative Assembly that the time limit for presentation of the report of the Joint Select Committee on the Mysore Prevention of Fragmentation and Consolidation of Holdings Bill, 1964, be extended till the end of October 1966."

MR. SPEAKER.—The question is :—

" That under the Second proviso to sub-rule (1) of rule 238 read with rule 247 of the Rules of Procedure and Conduct of Business in the Mysore Legislative Assembly that the time limit for the presentation of the Report of the Joint Select Committee on the Mysore Religious and Charitable Institutions and Trusts Bill, 1962 be extended till the end of October 1966."

SRI S. SIVAPPA (Sravanabelagola).—Sir, I want to know from the Government as to how many times they have taken extension of time in regard to this Bill.

SRI RAMAKRISHNA HEGDE.—Sir, actually the Joint Select Committee has finished the work more than half and this is the second time we are coming with a request for extension of time.

MR. SPEAKER.—I may mention that last time it was mentioned that if there is going to be a Central Government Bill covering all the Trusts, this may be dropped. But, the Central Government Bill relates only to Hindu Endowments. Therefore, it is not fully covered by that.

The question is :—

" That under the Second proviso to sub-rule (1) of rule 238 read with rule 247 of the Rules of Procedure and Conduct of Business in the Mysore Legislative Assembly that the time limit for

(MR. SPEAKER)

presentation of the report of the Joint Select Committee on the Mysore Prevention of Fragmentation and Consolidation of Holdings Bill, 1964, be extended till the end of October 1966."

The motion was adopted.

MYSORE SALES TAX (AMENDMENT) BILL, 1966

Motion to Consider—(*Debate continued*).

ಶ್ರೀ ಕೆ. ಪಿ. ರೇವಣ ಸಿದ್ದಪ್ಪ (ತಿಪಟೂರು).—ಸ್ವಾಮಿ, ಈ ಬಿಲ್ಲಿನ ಧ್ಯೇಯೋದ್ದೇಶವಲ್ಲಿ ಸರ್ಕಾರದ ಉತ್ಪತ್ತಿಯನ್ನು ಜಾಸ್ತಿ ಮಾಡಿಕೊಳ್ಳುವುದಕ್ಕೆ ಮತ್ತು ದೇಶದಲ್ಲಿ ಅಗತ್ಯವಾಗಿ ಆಗಬೇಕಾದ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಮಾಡಲಿಕ್ಕೆ ಈ ಟ್ಯಾಕ್ಸ್‌ನ್ನು ಹಾಕುತ್ತಾ ಇದ್ದೇವೆ ಎಂದು ಹೇಳುತ್ತಾರೆ. ಸರ್ಕಾರಕ್ಕೆ ಉತ್ಪತ್ತಿ ಇಲ್ಲದ್ದೆ ಯಾವ ಅಭಿವೃದ್ಧಿ ಕಾರ್ಯಗಳನ್ನೂ ಮಾಡುವುದಕ್ಕಾಗುವುದಿಲ್ಲ. ತೆರಿಗೆಯನ್ನು ಹಾಕುವಾಗಲೆಲ್ಲಾ ನಮ್ಮನ್ನು ವಿರೋಧಿಸುತ್ತೀರಿ, ಅಭಿವೃದ್ಧಿ ಕಾರ್ಯಗಳು ಮಾತ್ರ ಆಗಬೇಕೆಂದು ಹೇಳುತ್ತೀರಿ, ಹೇಗೆ ಮಾಡುವುದಕ್ಕೆ ಸಾಧ್ಯ ಎಂದು ಅವರು ನಮ್ಮನ್ನು ಕೇಳುತ್ತಾರೆ. ಅವರು ಕೆಲವು ನಿಮಿಷಗಳ ಅವಕಾಶವನ್ನು ಕಲ್ಪಿಸಿಕೊಟ್ಟರೆ ನಾನು ಕೆಲವು ವಿವರಗಳನ್ನು ಕೊಡುತ್ತೇನೆ.

[MR. DEPUTY SPEAKER in the Chair.]

ಅವರು ಆದಕ್ಕೆ ಮನಸ್ಸು ಮಾಡುತ್ತೇವೆ ಎಂದು ಮೊದಲು ನನಗೆ ಭರವಸೆ ಕೊಡಬೇಕು ಏಕೆಂದರೆ ಈ ಸಭೆಯ ಕಾಲವನ್ನು ಬಹಳ ಅತ್ಯುಪಯುಕ್ತವಾದ ಕೆಲಸಗಳಿಗೆ ಉಪಯೋಗಿಸಬೇಕೇ ಹೊರತು ವೃಥಾ ಕಾಲಹರಣ ಮಾಡಬಾರದು. ಶಾಸನ ಸಭಾ ಸದಸ್ಯರಿಗೆ ಮಾತನಾಡಲು ಅನೇಕ ಅವಕಾಶಗಳು ಇರುತ್ತವೆ ಅವರಿಗೆ ಬೇಕಾದ್ದನ್ನು ಅವರು ಮಾತನಾಡಿಕೊಳ್ಳಲಿ, ನಾವು ನಮ್ಮ ಮನಸ್ಸಿಗೆ ಬಂದ ಉತ್ತರ ಹೇಳಿ ಮನೆಗೆ ಹೋಗೋಣ ಎಂಬ ದೃಷ್ಟಿ ಮಾನ್ಯ ಮಂತ್ರಿಗಳಿಗೆ ಹೋಗಬೇಕು. ನಿಜವಾಗಿಯೂ ಶಾಸನ ಸಭಾ ಸದಸ್ಯರು ತಮ್ಮ ಕ್ಷೇತ್ರಗಳಲ್ಲಿ ಏನೇನು ನ್ಯೂನತೆಗಳು ಇವೆ, ನಮ್ಮ ಸಂಪನ್ಮೂಲಗಳನ್ನು ಯಾವ ರೀತಿ ಹೆಚ್ಚಿಸಿಕೊಳ್ಳಬಹುದು ಎಂಬುದರ ಬಗ್ಗೆ ಜನ ಸಾಮಾನ್ಯರು ಮಾತನಾಡುತ್ತಾ ಇರುವ ವಿಷಯ ಏನು ಎಂಬುದನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಏಕೆಂದರೆ ತಾವು ಮಂತ್ರಿಗಳಾದ ಮೇಲೆ ತಮಗೆ ಜನರ ಸಂಪರ್ಕ ಬಹಳ ಕಡಿಮೆಯಾಗಿ ಇರುತ್ತದೆ.

ಸ್ವಾಮಿ, ನಿಜವಾಗಿಯೂ ರಾಜ್ಯಕ್ಕೆ ಒಳ್ಳೆಯದು ಮಾಡಬೇಕು ಎಂಬ ಉದ್ದೇಶ ನಿಮಗೆ ಇದ್ದ ಪಕ್ಷದಲ್ಲಿ ಮೊದಲು ಈ ಖಾದಿ ಬೋರ್ಡು, ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಇವುಗಳನ್ನು ಸರಿಪಡಿಸಬೇಕು. ಪ್ರತಿಯೊಂದು ಕಾರ್ಯಕ್ಕೂ ಹಣ ಬೇಕು. ಹಣ ಪಡೆಯಲು ಸರಕಾರ ಟ್ಯಾಕ್ಸ್ ಹಾಕುತ್ತದೆ. ದೇಶ ಅಭಿವೃದ್ಧಿ ಮಾಡಬೇಕಾಗಿದೆ. ನಾನು ಹೇಳುವುದು ಇಷ್ಟೇ. ಇರತಕ್ಕಂಥ ಹಣವನ್ನು ಸರಕಾರ ಉಳಿಸಿಕೊಳ್ಳುವುದಕ್ಕೆ ಆಗಿಲ್ಲ. ಆದುದರಿಂದ ಇದ್ದ ಹಣವನ್ನು ಉಳಿಸಿಕೊಂಡು ಸರಕಾರ ಉಪಯೋಗಿಸಬೇಕಾದುದು ಅತ್ಯಾವಶ್ಯಕ. ಹಣದ ಬಗ್ಗೆ ಇವತ್ತಿನ ದಿವಸ ಹಣವಿದ್ದವರೂ ಮಾತನಾಡುತ್ತಾರೆ, ಹಣವಿಲ್ಲದವರೂ ಮಾತನಾಡುತ್ತಾರೆ. ಒಂದು ಮಾತು ನಾನು ಹೇಳುತ್ತೇನೆ. ಈ ಖಾದಿ ಬೋರ್ಡು, ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟು, ಉತ್ಸವ ಮೂರ್ತಿಯಾಗಿರುವ ಗವರ್ನರ್ ಅವರು, ಡಿವಿಜನಲ್ ಕಮೀಷನರ್ ಅವರು ಇವರೆಲ್ಲರೂ ಏತಕ್ಕೆ ಬೇಕು ? ಗವರ್ನರ್ ಅವರು ಈ ಸಭೆಗೆ ಬಂದು ತಮ್ಮ ಅಡ್ರೆಸ್ಸನ್ನು ಓದಬೇಕಾದರೆ ಅದಕ್ಕೆ ಏನು ಸ್ಯಾಂಕ್ಷನ್ ಇದೆ ? ಅವರು ಬಹಳ ವಯಸ್ಸಾದವರು. ಅಂಥವರಿಗೆ ಒಂದು ದೊಡ್ಡ ಪುಸ್ತಕ ಕೊಟ್ಟು ಒಂದು ಒಂದೂ ಕಾಲು ಗಂಟೆ ವರೆಗೆ ಅವರಿಂದ ಓದಿಸಿದಿರಿ. ಇದು ಏತಕ್ಕೆ ಬೇಕು ? ರಾಜ್ಯಕ್ಕೆ ಏನೇನು ಆಗುತ್ತದೆ ಎಂಬುದನ್ನು ಹೇಳುವುದು ಅಷ್ಟೇ ಇದೆ ಅಲ್ಲವೇ ? ಸಕ್ಕರೆ ಕಾರ್ಖಾನೆ ಪ್ರಾರಂಭ ಮಾಡುವುದಕ್ಕೆ ದಿಲ್ಲಿಯಿಂದ ಹೇಳಿಕೆ ಬಂದರೆ ಲೈಸೆನ್ಸ್ ಕೊಡುತ್ತೀರಿ. ಮೂರು ಸಕ್ಕರೆ ಕಾರ್ಖಾನೆಗೆ ಲೈಸೆನ್ಸ್ ಪಡೆದಿದ್ದರೂ ಕೂಡ ಇವರು ಒಂದು ಸಕ್ಕರೆ ಕಾರ್ಖಾನೆ ಎಂದು ಹೇಳಿದ್ದಾರೆ.